ಆಗಿದ್ದರಿಂದ ಅವನು ಪ್ರಜ್ಞೆ ತಪ್ಪಿದ್ದ. ಅಲ್ಲಿ ಕೆಲಸ ಮಾಡೋ ಅನೇಕರು ಇನ್ನೂ ಬಂದಿರಲಿಲ್ಲ. ತೇಜಸ್ವಿ, ಮುನಾವರ್‌ನನ್ನು ಆಂಬುಲೆನ್ಸ್‌ನಲ್ಲಿ ಮಲಗಿಸಲು ಸಹಾಯ ಮಾಡಿದ. ಅವನ ಜತೆ ಆಸ್ಪತ್ರೆಗೂ ಹೋದ. ಮುನಾವರ್‌ಗೆ ತಕ್ಷಣವೇ ಆಪರೇಷನ್ ಮಾಡಿ ಜಜ್ಜಿದ ಕೈ ಭಾಗವನ್ನು ಕತ್ತರಿಸಿ ತೆಗೆದರು. ಅವನದು ರೇರ್ ಬ್ಲಡ್ ಗ್ರೂಪಂತೆ. ತೇಜಸ್ವಿಯೇ ಪರಿಚಯದವರೊಬ್ಬರಿಗೆ ಫೋನ್ ಮಾಡಿ ಬ್ಲಡ್‌ಗೆ ವ್ಯವಸ್ಥೆ ಮಾಡಿದ.

ತೇಜಸ್ವಿ, ಆಫೀಸಿಗೆ ಬಂದು ಅಟೆಂಡೆನ್ಸ್ ಹಾಕಿ ಎಲ್ಲಿಗೋ ಹೋಗಿದ್ದಾನೆ ಅಂತ ಓಂಪ್ರಕಾಶ್, ನ್ಯೂಸ್ ಎಡಿಟರ್‌ಗೆ ದೂರು ಹೇಳಿದರು. ಸಂಜೆ ಮೀಟಿಂಗ್ ಮುಗಿಯುವ ಹೊತ್ತಿಗೆ ತೇಜಸ್ವಿ ಬಂದ. ಕೂಡಲೇ ಅವನನ್ನು ಕ್ಯಾಬಿನ್ ಕರೆಸಿಕೊಂಡು ನ್ಯೂಸ್ ಎಡಿಟರ್ ವಿಚಾರಣೆ ಶುರು ಮಾಡಿದರು.

‘ಸಾರ್, ಇವತ್ತು ನಮ್ಮ ಪ್ರಿಂಟಿಂಗ್ ಸೆಕ್ಷನ್‌ನಲ್ಲಿ ಮುನಾವರ್ ಅಂತ ನಮ್ಮ ಮೆಕ್ಯಾನಿಕ್ ಒಬ್ಬರ ಕೈ ಮಿಷಿನ್‌ಗೆ ಸಿಕ್ಕಿ ಜಜ್ಜಿ ಹೋಗಿತ್ತು. ಅವರಿಗೆ ಪ್ರಜ್ಞೆ ಇರಲಿಲ್ಲ. ಅಲ್ಲಿ ಪರ್ಸೊನೆಲ್ ಡಿಪಾರ್ಟ್‌ಮೆಂಟಿನ ಒಬ್ಬರು ಲೇಡಿ ಮಾತ್ರ ಇದ್ದರು. ಮುನಾವರ್ ಅವರನ್ನು ಆಂಬುಲೆನ್ಸ್ ಹತ್ತಿಸೋಕೆ ಅಂತ ನಾನು ಹೋಗಿದ್ದೆ. ನಾನು ಒಬ್ಬಳೇ ಇದೀನಿ, ಏನು ಮಾಡಬೇಕು ಅಂತ ನಂಗೆ ಗೊತ್ತಾಗ್ತ ಇಲ್ಲ. ನೀವೂ ನನ್ನ ಜತೆ ಆಸ್ಪತ್ರೆಗೆ ಬನ್ನಿ ಅಂತ ಆ ಮೇಡಂ ಕರೆದರು. ಅವರಿಗೆ ಹೆಲ್ಪ್ ಮಾಡೋಣ ಅಂತ ನಾನೂ ಆಸ್ಪತ್ರೆಗೆ ಹೋಗಬೇಕಾಯ್ತು. ಅಲ್ಲಿಗೆ ಹೋದ ಮೇಲೆ ಗೊತ್ತಾಯ್ತು, ಮುನಾವರ್ ಅವರದ್ದು ರೇರ್ ಬ್ಲಡ್ ಗ್ರೂಪ್ ಅಂತ. ಆಸ್ಪತ್ರೆಯಲ್ಲಿ ಬ್ಲಡ್ ಇರಲಿಲ್ಲ. ಸರ್ಜರಿ ಹೊತ್ತಿಗೆ ಬ್ಲಡ್ ಬೇಕಾಗುತ್ತೆ ಅರೇಂಜ್ ಮಾಡಿ ಅಂತ ಡಾಕ್ಟರು ಹೇಳಿದರು. ಕೊನೆಗೆ ನಂಗೆ ಪರಿಚಯವಿದ್ದ ಕೆಲವರಿಗೆ ಫೋನ್ ಮಾಡಿದ ಮೇಲೆ ಒಬ್ಬರು ಡೋನರ್ ಸಿಕ್ಕರು. ಅವರನ್ನು ಕರೆಸಿಕೊಂಡು ಬ್ಲಡ್ ಕೊಡಿಸಿದೆ. ಸರ್ಜರಿ ಆಯಿತು. ಮುನಾವರ್ ಈಗ ಔಟಾಫ್ ಡೇಂಜರ್... ಪ್ರಕಾಶ್ ಸರ್‌ಗೆ ಫೋನ್ ಮಾಡಿ ಹೇಳೋಕೆ ಆಗಲಿಲ್ಲ ಸಾರಿ’ ಅಂತ ತೇಜಸ್ವಿ ಹೇಳುತ್ತಿದ್ದಂತೆ ನ್ಯೂಸ್ ಎಡಿಟರ್‌ಗೆ ರೇಗಿ ಹೋಯಿತು.

‘ಅಲ್ರಿ, ಅದನೆಲ್ಲ ನೋಡಿಕೊಳ್ಳೋಕೆ ಅಂತಲೇ ಪರ್ಸೊನೆಲ್ ಡಿಪಾರ್ಟ್‌ಮೆಂಟ್ ಇರೋದು. ಅವರ ಕೆಲಸವೇ ಅದು. ನೀವು ನಿಮ್ಮ ಕೆಲಸ ಬಿಟ್ಟು ಅಲ್ಲಿಗೆ ಹೋಗೋಕೆ ಯಾರು ಹೇಳಿದ್ರು...’ ಅಂತ ದಬಾಯಿಸಿದರು. ತೇಜಸ್ವಿ ಸುಮ್ಮನಿದ್ದ.

‘ನಿನ್ನೆ ಮಧ್ಯಾಹ್ನ ಸೀತಾಲಕ್ಷ್ಮಿ ಅವರನ್ನು ಟೀಸ್ ಮಾಡಿದಿರಂತೆ. ಅವರ ಕಡೆ ನೋಡಿಕೊಂಡು ಹದಿನಾಲ್ಕು ದಿವಸ ಮನೆವಾಸ ಮುಗಿಸಿ ಮರಳಿ ಬಂದಳು ಸೀತೆ ಅಂತ ಹಾಡು ಹೇಳಿಕೊಂಡು ರೇಗಿಸಿದರಂತೆ. ಎರಡುವಾರ ಪಿಎಲ್ ಹಾಕಿದ್ದಕ್ಕೆ ತೇಜಸ್ವಿ ಚುಡಾಯಿಸಿದ ಅಂತ ನಿಮ್ಮ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರೆ. ನಾಳೆ ನಿಮಗೆ ಎರಡು ನೋಟಿಸ್ ಕೊಡ್ತೀನಿ, ಉತ್ತರ ಕೊಡಿ. ನೀವು ಪ್ರೊಬೆಷನರಿ ಪೀರಿಯಡ್‌ನಲ್ಲಿದೀರ ಅನ್ನೋದು ನೆನಪಿರಲಿ’ ಅಂತ ಎಚ್ಚರಿಸಿ, ಹೋಗಿ ಕೆಲಸ ನೋಡಿ ಅಂತ ಗದರಿದರು. ನ್ಯೂಸ್ ಎಡಿಟರ್‌ಗೆ ನಿಜವಾಗಿಯೂ ಸಿಟ್ಟು ಬಂದಿತ್ತು.

ಮಾರನೇ ದಿನ ತೇಜಸ್ವಿ, ಅಜಯ್ ಇಬ್ಬರೂ ಆಫೀಸಿಗೆ ಬರಲಿಲ್ಲ. ನ್ಯೂಸ್ ಎಡಿಟರ್ ತೇಜಸ್ವಿಗೆ ನೋಟಿಸ್ ಕೊಡಬೇಕು ಅಂತ ಅವನು ಬರುವುದನ್ನೇ ಕಾಯುತ್ತ ಕೂತಿದ್ದರು.

ಅಷ್ಟರಲ್ಲಿ ತೇಜಸ್ವಿ ಅಂದ್ರೆ ಯಾರು? ಅಂತ ಕೇಳಿಕೊಂಡು ಪರ್ಸೊನೆಲ್ ಮ್ಯಾನೇಜರ್ ಪ್ರಸಾದ್ ಹೆಗಡೆ ನ್ಯೂಸ್ ಎಡಿಟರ್ ಕ್ಯಾಬಿನ್‌ಗೆ ಬಂದರು. ‘ನಿನ್ನೆ ಪ್ರಿಂಟಿಂಗ್ ಸೆಕ್ಷನ್‌ನಲ್ಲಿ ಒಂದು ಎಡವಟ್ಟಾಯ್ತು ಸಾರ್. ಮುನಾವರ್ ಅಂತ ಮೆಕ್ಯಾನಿಕ್ ಒಬ್ಬರ ಕೈ ಮಿಷಿನ್‌ಗೆ ಸಿಕ್ಕಿ ಪಡ್ಚ ಆಗಿತ್ತು... ನಿಮ್ಮ ಎಡಿಟೋರಿಯಲ್ ಸೆಕ್ಷನ್‌ನ ತೇಜಸ್ವಿ ಅನ್ನೋರು ಬಂದು ಮುನಾವರ್‌ನ ಆಸ್ಪತ್ರೆಗೆ ಸೇರಿಸಲು ಸಹಾಯ ಮಾಡಿದರಂತೆ. ಅವರ ಜತೆ ಆಸ್ಪತ್ರೆಗೂ ಹೋಗಿ ಸರ್ಜರಿ ಆಗೋತನಕ ಅಲ್ಲೇ ಇದ್ದು. ಬ್ಲಡ್‌ಗೆ ವ್ಯವಸ್ಥೆ ಮಾಡಿದರಂತೆ. ನಿನ್ನೆ ನಾನು ರಜಾ ಇದ್ದೆ. ಅದು ನಮ್ಮವರು ಮಾಡಬೇಕಾದ ಕೆಲಸ.